ಕೋಟಿ ಆಗಿರುತ್ತದೆ ಹಾಗೂ ಈ ಹಣವನ್ನು ಇನ್ನು ಬಿಡುಗಡೆ ಮಾಡಿರುವುದಿಲ್ಲ.

ಊ) ದಿನಾಂಕ: 01–04–2006ರಿಂದ ಪಡೆದ ಅಲ್ಪಾವಧಿ/ ಮಧ್ಯಮಾವಧಿ ಸಾಲಗಳಿಗೆ ಶೇಕಡ 4ರ ಬಡ್ಡಿ ದರದಲ್ಲಿ ಸಾಲ ನೀಡಿದ ಸಹಕಾರಿ ಬ್ಯಾಂಕುಗಳಿಗೆ ಬರಬೇಕಾದ ಬಡ್ಡಿ ಸಹಾಯಧನ ಗರಿಷ್ಠ ಶೇಕಡ 7.5 ರವರೆಗೆ ಸರ್ಕಾರವು ತುಂಬಿಕೊಡುತ್ತದೆ.

ಋ) 2006–07 ನೇ ಸಾಲಿನ ಬಡ್ಡಿ ಸಹಾಯಧನ ಬೇಡಿಕೆಗೆ ಸಂಬಂಧಿಸಿದಂತೆ ರೂ.1888.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಋ) ಈ ಹಿಂದೆ ನೀಡಿದ್ದ ಮಧ್ಯಮಾವಧಿ ಸಾಲಗಳಿಗೆ ಶೇ. 6ರ ಬಡ್ಡಿ ಮುಂದುವರೆದಿದ್ದು, 2005–06ನೇ ಸಾಲಿನಲ್ಲಿ ಸಹಕಾರಿ ಸಂಸ್ಥೆಗಳು ರೈತರಿಗೆ ನೀಡಿರುವ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರವು ನೀಡಬೇಕಾದ ಬಡ್ಡಿ ಸಹಾಯಧನದ ಮೊತ್ತ ರೂ.ಗಳನ್ನು 143.71 ಕೋಟಿ ಆಗಿದ್ದು ಇದರಲ್ಲಿ 115.14 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

1176 (1518) ಶ್ರೀ ಕಿರಣ್ ಕುಮಾರ್ ಕೆ.ಎಸ್. (ಕಳಂಬೆಳ್ಳ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕಿನ ಚಿಕ್ಕನಹಳ್ಳಿ ರೈತರು ಬೆಳೆಯುತ್ತಿರುವ ಹೂವುಗಳಾವುವು? (ವಿಸ್ತೀರ್ಣವಾರು ವಿವರ ಒದಗಿಸುವುದು)

ಆ) ರೈತರು ಬೆಳೆದ ಹೂವನ್ನು ಯಾವ ಮಾರುಕಟ್ಟೆಯಲ್ಲಿ ಮಾರಲಾಗುತ್ತಿದೆ. ಈ ಉದ್ಯೋಗದಲ್ಲಿ ನಿರತರಾಗಿರುವ ರೈತರುಗಳೆಷ್ಟು?

ಇ) ತುಮಕೂರು ಜಿಲ್ಲೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದು ಈವರೆವಿಗೆ ಪುಷ್ಪೋದ್ಯಮಕ್ಕೆ ಹಸಿರುಮನೆ ನಿರ್ಮಾಣಕ್ಕೆ ಹಾಗೂ ಹನಿ ಮತ್ತು ತುಂತುರು ನೀರಾವರಿ ಸೌಲಭ್ಯಕ್ಕೆ ಮತ್ತು ಶೈತ್ಯಾಗಾರ ನಿರ್ಮಾಣಕ್ಕೆ ಯಾವ ವಿಧವಾದ ಸಹಾಯಧನ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ; ಸದರಿ ಯೋಜನೆಯನ್ನು ಪಡೆದ ಫಲಾನುಭವಿಗಳೆಷ್ಟು ವಿವರ ನೀಡುವುದು;

ಈ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಹೊಸ ತಂತ್ರಜ್ಞಾನ ತರಬೇತಿ ಯೋಜನೆಯಡಿಯಲ್ಲಿ ಹೊಸ ತಂತ್ರಜ್ಞಾನ

ತರಬೇತಿ ಮತ್ತು ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲು ರೂಪಿಸಲಾದ ಯೋಜನೆಗಳಾವುವು?

ಊ) ಸರ್ಕಾರಿ ಆದೇಶದಂತೆ ಚಿಕ್ಕನಹಳ್ಳಿಯಲ್ಲಿ ತೋಟಗಾರಿಕೆ ಉದ್ದೇಶಕ್ಕೆ ನೀಡಲಾದ ಜಮೀನಿನಲ್ಲಿ ಹೂವಿನ ಮಾರುಕಟ್ಟೆ ಮತ್ತು ಶೀತಲೀಕರಣ ಕೇಂದ್ರಗಳನ್ನು ಪ್ರಾರಂಭಿಸಲಾಗುವುದೇ?

ಋ) ಈ ಹಳ್ಳಿಯ ತರಬೇತಿ ಕೇಂದ್ರದಲ್ಲಿ ಹೂವಿನ ಬೆಳೆಗಾರರಿಗೆ ಹೊಸ ತಂತ್ರಜ್ಞಾನದ ಪ್ರಾಯೋಗಿಕ ತರಬೇತಿ ನೀಡಲಾಗುವುದೇ?

ೠ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿಯೆ ಎಲ್ಲಾ ಸೌಲಭ್ಯಗಳನ್ನು ಚಿಕ್ಕನಹಳ್ಳಿಯ ಹೂವು ಬೆಳೆಗಾರರಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶಶಿಕಾಂತ ಅಕ್ಕಪ್ಪ.ನಾಯಿಕ (ತೋಟಗಾರಿಕೆ ಸಚಿವರು) :

ಅ) ಶಿರಾ ತಾಲ್ಲೂಕಿನ ಚಿಕ್ಕನಹಳ್ಳಿಯ 5 ಕಿ.ಮೀ. ವ್ಯಾಪ್ತಿಯ ಗ್ರಾಮಗಳಲ್ಲಿ ರೈತರು ಬೆಳೆಯುವ ಹೂವುಗಳ ವಿಸ್ತೀರ್ಣವಾರು ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಬೆಳೆಗಳು	ವಿಸ್ತೀರ್ಣ (ಎಕರೆಗಳಲ್ಲಿ)
ಎ)	ಸೇವಂತಿಗೆ	215
ಬಿ)	ಮಲ್ಲಿಗೆ ಮತ್ತು ಕಾಕಡ	170
ಸಿ)	ಕನಕಾಂಬರ	63

ಆ) ಬೆಂಗಳೂರು, ತುಮಕೂರು, ದಾವಣಗೆರೆ, ಶಿರಗುಪ್ಪ, ರಾಣಿಬೆನ್ನೂರು, ಬೆಳಗಾಂ ಹಾಗೂ ಮಹಾರಾಷ್ಟ್ರದ ಕೆಲವು ಪ್ರದೇಶಗಳ ಮಾರುಕಟ್ಟೆಗಳಲ್ಲಿ ಮಾರಲಾಗುತ್ತಿದೆ. ಈ ಉದ್ಯೋಗದಲ್ಲಿ ಸುಮಾರು 900 ರೈತರು ನಿರತರಾಗಿರುತ್ತಾರೆ.

ಇ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಕೆಳಕಾಣಿಸಿದ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1. ಪುಷ್ಪೋದ್ಯಮ ಅಭಿವೃದ್ಧಿಗಾಗಿ ಕಟ್‌ಫ್ಲವರ್ಸ್ ಬೇಸಾಯ ಮಾಡಲು ರೂ. 35,000/–, ಗಡ್ಡೆ ಜಾತಿಯ ಹೂವುಗಳ

ಬೇಸಾಯ ಮಾಡಲು ರೂ.45,000/– ಮತ್ತು ಬಿಡಿ ಹೂಗಳ ಬೇಸಾಯ ಮಾಡಲು ರೂ. 12,000/–ಗಳ ಗರಿಷ್ಠ ಸಹಾಯಧನವನ್ನು, ಪ್ರತಿ ಎಕರೆಗೆ ಅಥವಾ 500 ಚದರ ಮೀಟರ್ ರಕ್ಷಿತ ಬೇಸಾಯಕ್ಕೆ ನೀಡಲಾಗುತ್ತಿದೆ.

2. ಹಸಿರುಮನೆ ನಿರ್ಮಾಣಕ್ಕೆ ಅಧಿಕ ವೆಚ್ಚದ ಘಟಕಗಳು ಅಥವಾ ಸಾಮಾನ್ಯ ವೆಚ್ಚದ ಘಟಕಗಳಿಗೆ ಪ್ರತಿ 1000 ಚದರ ಮೀಟರ್‌ಗಳಿಗೆ ಅನುಕ್ರಮವಾಗಿ ಗರಿಷ್ಠ ರೂ. 3.25 ಲಕ್ಷಗಳು ಅಥವಾ ರೂ. 1.25 ಲಕ್ಷಗಳ ಸಹಾಯಧನವನ್ನು ನೀಡಲಾಗುವುದು.
3. ಹನಿನೀರಾವರಿ ಅಳವಡಿಸಲು ಶೇಕಡ 75ರಷ್ಟು ಮತ್ತು ತುಂತುರು ನೀರಾವರಿ ಅಳವಡಿಸಲು ಶೇಕಡ 50ರಷ್ಟು ಸಹಾಯಧನ ನೀಡಲಾಗುವುದು.
4. ಶೈತ್ಯಾಗಾರ ನಿರ್ಮಿಸಲು ಶೇಕಡ 25ರ ಪ್ರಮಾಣದಲ್ಲಿ ಗರಿಷ್ಠ ರೂ. 50.00 ಲಕ್ಷಗಳ ಸಹಾಯಧನವನ್ನು ನೀಡಲಾಗುವುದು.

ಈ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಒಟ್ಟು 4483 ಫಲಾನುಭವಿಗಳು ಲಾಭ ಪಡೆದಿರುತ್ತಾರೆ.

ಈ) ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

1. ಹೊಸತಂತ್ರಜ್ಞಾನ ತರಬೇತಿಗಾಗಿ ರೈತರಿಗೆ ರಾಜ್ಯದಲ್ಲಿ ಮತ್ತು ಹೊರ ರಾಜ್ಯಗಳಲ್ಲಿ ಸರ್ಕಾರಿ, ಸರ್ಕಾರೇತರ ಅಥವಾ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ತರಬೇತಿ ನೀಡಲಾಗುವುದು. ತೋಟಗಾರಿಕೆ ಉದ್ದಿಮೆದಾರರಿಗೆ ಮತ್ತು ಇಲಾಖಾ ಸಿಬ್ಬಂದಿಗೆ ತರಬೇತಿ ನೀಡಲಾಗುವುದು.
2. ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲು ಸಂಘ ಸಂಸ್ಥೆಗಳಿಗೆ ರೈತ ಸಂತೆ ನಿರ್ಮಾಣಕ್ಕಾಗಿ ಅಥವಾ ಸಂಗ್ರಹಣೆ ಮತ್ತು ಗ್ರೇಡಿಂಗ್‌ಗಾಗಿ ಮೂಲ ಸೌಕರ್ಯಗಳನ್ನು ಕಲ್ಪಿಸಲು ರೂ.15.00 ಲಕ್ಷಗಳ ವರೆಗೆ ಸಹಾಯಧನ ನೀಡಲಾಗುವುದು. ಸಗಟು ಮಾರುಕಟ್ಟೆ ನಿರ್ಮಿಸಲು ತಗಲುವ ವೆಚ್ಚದಲ್ಲಿ ಮೂಲ ಸೌಕರ್ಯಗಳ ಬಾಬ್ತಿಗೆ ಶೇಕಡ 25ರಷ್ಟು ಸಹಾಯಧನವನ್ನು ಸಂಸ್ಥೆ/ಉದ್ಯಮಿಗಳಿಗೆ ನೀಡಲಾಗುತ್ತದೆ.

ಉ) ಹೂವಿನ ಮಾರುಕಟ್ಟೆ ಮತ್ತು ಶೀಥಲೀಕರಣ ಕೇಂದ್ರಗಳನ್ನು ಪ್ರಾರಂಭಿಸಲು ಮುಂದೆ ಬರುವ ಸಂಘ ಸಂಸ್ಥೆಗಳು ಅಥವಾ ಖಾಸಗಿಯವರಿಗೆ ಸರ್ಕಾರದ ಯೋಜನೆಗಳಡಿಯಲ್ಲಿ ಅಗತ್ಯವಿರುವ ನೆರವನ್ನು ನೀಡಲಾಗುವುದು.

ಊ) ಹೌದು.

ಋ) ಹೌದು.

1179 (1280) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು ಮತ್ತು ಹೈದರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಿಂದ ಬರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿಸಿರುವ / ಸ್ಥಾಪಿಸಲಾಗುವ ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಖಂಡಸಾರಿಗಳಿಗೆ ನೀಡಲಾಗಿರುವ ಸಾಲದ ಮೊತ್ತವೆಷ್ಟು? (ಕಾರ್ಖಾನೆವಾರು ವಿವರಗಳನ್ನು ಒದಗಿಸುವುದು)

ಆ) ಈ ಬ್ಯಾಂಕುಗಳಿಂದ ಪಡೆದುಕೊಂಡಿರುವ ಸಾಲದ ಪೈಕಿ ಇಲ್ಲಿಯವರೆಗೆ ಎಷ್ಟು ಸಾಲವನ್ನು ಈ ಕಾರ್ಖಾನೆಗಳು ಮರುಪಾವತಿ ಮಾಡಿವೆ? ಬಾಕಿ ಉಳಿದಿರುವ ಸಾಲವೆಷ್ಟು?

ಇ) ಯಾವ ಯಾವ ಕಾರ್ಖಾನೆಗಳು ಸಾಲ ಮರುಪಾವತಿ ಮಾಡದೇ ಸುಸ್ತಿಯಾಗಿವೆ?

ಈ) ಕಾರ್ಖಾನೆಗಳಿಂದ ಬ್ಯಾಂಕಿಗೆ ಇಂದಿನವರೆಗೆ ಬರಬೇಕಾಗಿರುವ ಅಸಲು, ಬಡ್ಡಿ, ಸುಸ್ತಿ ಬಡ್ಡಿ ಮತ್ತು ಇತರೆ ಬಡ್ಡಿಗಳ ಒಟ್ಟು ಮೊತ್ತವೆಷ್ಟು? (ಕಾರ್ಖಾನೆವಾರು ಪ್ರತ್ಯೇಕ ವಿವರಗಳನ್ನು ಒದಗಿಸುವುದು)

ಉ) ಸದರಿ ಕಾರ್ಖಾನೆಗಳ / ಕಂಡ ಸಾರಿಗಳ ಮುಖ್ಯಸ್ಥರ ಹೆಸರು ಮತ್ತು ಇಂದು ಬ್ಯಾಂಕಿಗೆ ನೀಡಿರುವ ಭದ್ರತೆಯ ವಿವರಗಳೇನು?

ಊ) ಈ ಕಾರ್ಖಾನೆಗಳಿಗೆ ಸುಸ್ತಿಯಾಗಿರುವ ಸಾಲವನ್ನು ವಸೂಲು ಮಾಡಲು ಇಲ್ಲಿಯವರೆವಿಗೆ ಬ್ಯಾಂಕುಗಳಿಗೆ ತೆಗೆದುಕೊಂಡಿರುವ ಶಿಸ್ತಿನ ಕ್ರಮಗಳೇನು?

ಋ) ಸದರಿ ವಿಚಾರದಲ್ಲಿ, ಕ್ರಿಮಿನಲ್ ದಾವೆಗಳನ್ನು ಹೂಡಲಾಗಿದೆಯೇ?